**ಸಿ.ಡಬ್ಲೂ–2 / ಪಿ.ಡಬ್ಲೂ–2**

**ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ .**

**ಸಿ.ಸಿ.ನಂ. 651/2019**

| | | |
|---|---|---|
| ಸಾಕ್ಷಿದಾರರ ಹೆಸರು | : | ಸಿದ್ದರಾಜು |
| ತಂದೆಯ ಹೆಸರು | : | ಲೇಟ್ ಸಿದ್ದಯ್ಯ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಕಾವಲುಗಾರ |
| ವಾಸಸ್ಥಳ | : | ನಂಜನಗೂಡು ಟೌನ್. |

**ಸಾಕ್ಷಿಯನ್ನು ದಿನಾಂಕಃ 17.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ** ಸ. ಸ. ಅ. **ರವರಿಂದಃ**

ಆರೋಪಿಗಳು ನಮ್ಮ ಗ್ರಾಮದ ನಿವಾಸಿಗಳಾಗಿರುತ್ತಾರೆ. ಚಾಸಾ–1 ನನ್ನ ಹೆಂಡತಿ. ಚಾಸಾ–3 ನನ್ನ ಮಗಳು. ನಮ್ಮ ಮನೆಯಲ್ಲಿ ಪೂಜೆ ಮಾಡುವ ವಿಚಾರದಲ್ಲಿ ನಮಗು ಮತ್ತು ಆರೋಪಿಗಳಿಗು ಬಾಯಿಮಾತಿನ ಚರ್ಚೆಯಾಗಿದ್ದು, ಇಷ್ಟಕ್ಕೆ ನನ್ನ ಹೆಂಡತಿ ಹೆದರಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಗೆ ಹೋಗಿದ್ದು, ನಾನು ಕೂಡ ಅವರ ಜೊತೆ ಹೋದಾಗ ಪೊಲೀಸರು ಒಂದು ದಾಖಲೆಗೆ ನನ್ನ ಸಹಿ ಪಡೆದಿರುತ್ತಾರೆ. ಸದರಿ ದಾಖಲೆ ಸ್ಥಳ ಮಹಜರ್ ಗಳಾಗಿದ್ದು, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸ್ಥಳ ಮಹಜರ್ ನ್ನು **ನಿ.ಪಿ–4** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ–4(ಎ)** ಎಂದು ಗುರುತಿಸಲಾಯಿತು. ನಿ.ಪಿ–4 ರಲ್ಲಿ ಏನೆಲ್ಲಾ ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಮತ್ತು ಏನನ್ನೂ ವಶಪಡಿಸಿಕೊಂಡಿಲ್ಲ. ಆರೋಪಿಗಳು ಅಕ್ರಮ ಕೂಟ ಸೇರಿ ನಮ್ಮ ಮನೆಗೆ ಅಕ್ರಮ ಪ್ರವೇಶ ಮಾಡಿಲ್ಲ, ಯಾರನ್ನು ಗೃಹಬಂಧನದಲ್ಲಿರಿಸಿರುವುದಿಲ್ಲ, ನನಗೆ ಮತ್ತು ಚಾಸಾ–1, 3 ಮತ್ತು 4 ರವರಿಗೆ ಯಾವುದೇ

ಹಲ್ಲೆ ಮಾಡಿಲ್ಲ, ಚಾಸಾ-3 ರವರನ್ನು ಎಳೆದಾಡಿ ಯಾವುದೇ ಮಾನಭಂಗ ಮಾಡಲು ಪ್ರಯತ್ನಿಸಿಲ್ಲ ಮತ್ತು ಯಾವುದೇ ಅವಾಚ್ಯ ಶಬ್ದಗಳಿಂದ ಬೈದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**<u>ಪಾಟೀಸವಾಲುಃ ಸ.ಸ.ಅ ರವರಿಂದಃ</u>**

ದಿನಾಂಕ 01.01.2018 ರಂದು ಸಂಜೆ 5.00 ಗಂಟೆ ಸಮಯದಲ್ಲಿ ಇಮ್ಮಾವುಹುಂಡಿ ಗ್ರಾಮದಲ್ಲಿರುವ ನಮ್ಮ ಮನೆಯಲ್ಲಿ ಚಾಸಾ-4 ರವರಿಂದ ಪೂಜೆ ಮಾಡಿಸುತ್ತಿದ್ದಾಗ ಆರೋಪಿಗಳು ಅಕ್ರಮ ಕೂಟ ಸೇರಿ ನಮ್ಮ ಮನೆಗೆ ಗೃಹಾತಿಕ್ರಮಣ ಮಾಡಿ ಚಾಸಾ-4 ರವರನ್ನು ಬೋಳಿಮಗನೆ, ಸೂಳೆಮಗನೆ ನೀನು ಯಾವ ಪೂಜೆ ಮಾಡುವುದು ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. 2, 12 ಮತ್ತು 13 ನೇ ಆರೋಪಿಗಳು ದೊಣ್ಣೆಯಿಂದ ಚಾಸಾ-4 ರವರಿಗೆ ಹಲ್ಲೆ ಮಾಡಿದ್ದಲ್ಲದೆ ಬಿಡಿಸಲು ಹೋದ ಚಾಸಾ-1 ರವರನ್ನು 19, 20 ಮತ್ತು 21 ನೇ ಆರೋಪಿಗಳು ಹಿಡಿದು ಎಳೆದಾಡಿ ಅವರ ರವಿಕೆ ಹರಿದುಹಾಕಿ ಮಾನಭಂಗ ಮಾಡಲು ಪ್ರಯತ್ನಿಸಿರುತ್ತಾರೆ ಎಂದರೆ ಸರಿಯಲ್ಲ. 2, 14 ಮತ್ತು 16 ನೇ ಆರೋಪಿಗಳು ಚಾಸಾ-3 ರವರನ್ನು ಕೂಡ ಮಾನಭಂಗ ಮಾಡಲು ಪ್ರಯತ್ನಿಸಿರುತ್ತಾರೆ ಎಂದರೆ ಸರಿಯಲ್ಲ. 1, 4, 6, 7, 9, 10, 15, 17 ಮತ್ತು 18 ನೇ ಆರೋಪಿಗಳು ನನ್ನನ್ನು ತಬ್ಬಿಡಿದುಕೊಂಡು ಮನೆಯಲ್ಲಿ ಕೂಡಿಹಾಕಿ ಬೀಗ ಹಾಕಿ ಚಾಸಾ-4 ರವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಹೆಂಡತಿ ದೂರು ಕೊಟ್ಟ ಮೇರೆಗೆ ದಿನಾಂಕ 03.01.2018 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದು ನಾನು ತೋರಿಸಿಕೊಟ್ಟಂತೆ ನಿ.ಪಿ-4 ರಂತೆ ಮಹಜರ್ ಮಾಡಿ 3

ದೊಣ್ಣೆಗಳನ್ನು ವಶಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಈಗ ನನಗೆ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ಸದರಿ ಹೇಳಿಕೆಯನ್ನು ಅಲ್ಲಗಳೆದಿದ್ದರಿಂದ ಕೆಂಪು ಶಾಹಿಯಿಂದ ಗುರುತಿಸಲಾದ ಸದರಿ ಹೇಳಿಕೆಯ ಭಾಗವನ್ನು **ನಿ.ಪಿ-5** ಎಂದು ಗುರುತಿಸಲಾಯಿತು. ಆರೋಪಿಗಳು ಹಾಗು ನಾನು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಆ ಕಾರಣದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲುಃ** ಆರೋಪಿಗಳ ಪರ ವಕೀಲರಿಂದಃ ಏನೂ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ನಂಜನಗೂಡು.**